ಸಿಸಿ ನಂಃ 170/2025
ಸಿ.ಡಬ್ಲೂ 1/ಪಿ.ಡಬ್ಲೂ 1

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

ಸಾಕ್ಷಿದಾರರ ಹೆಸರು ಃ ಚನ್ನಬಸಪ್ಪ ಮಾಳಗಿ
ತಂದೆಯ ಹೆಸರು ಃ ಹೊಳೆಪ್ಪ
ವಯಸ್ಸು ಃ 52 ವರ್ಷ
ಉದ್ಯೋಗ ಃ ಖಾಸಗಿ ಕೆಲಸ
ವಾಸ ಸ್ಥಳ ಃ ಧಾರವಾಡ .

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **20-09-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಚಾಸಾ-9 ಮತ್ತು ಅಪಘಾತದಲ್ಲಿ ಮರಣ ಹೊಂದಿದ ವ್ಯಕ್ತಿಗಳ ಪರಿಚಯ ಇದೆ . ಅವರು ನಮ್ಮ ಓಣಿಯವರಾಗಿರುತ್ತಾರೆ . ದಿಃ 20.10.2024 ರಂದು ನಾನು ಮನೆಯಲ್ಲಿರುವಾಗ ನಮ್ಮ ನೆರೆ ಹೊರೆಯವರು ದೂರವಾಣಿಯಲ್ಲಿ ಸಂಪರ್ಕಿಸಿ ಧಾರವಾಡದ ಸಂಪಿಗೆ ನಗರದ ಬಸ್ ನಿಲ್ದಾಣದ ಹತ್ತಿರ ಅಪಘಾತವಾಗಿರುವುದಾಗಿ ಹೇಳಿದರು . ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ ರಮೇಶ ಮತ್ತು ಮರಿಯವ್ವ ಇವರ ಶವಗಳು ಬಿದಿದ್ದವು . ನಂತರ ಮೃತರ ಶವಗಳನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ಸಾಗಿಸಿದೆವು . ಲಾರಿ ಮತ್ತು ರಿಕ್ಷಾದ ನಡುವೆ ಅಪಘಾತವಾಗಿರುವುದಾಗಿ ತಿಳಿಯಿತು . ಈ ಕುರಿತು ದೂರು ನೀಡಿದ್ದೇನೆ . ಸಾಕ್ಷಿ ಗುರುತಿಸಿದ ದೂರನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿ . ಗಾಯಾಳುಗಳನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ದಾಖಲಿಸಿದೆವು . ಅದೇ ದಿನ ಪೊಲಿಸರು ಸ್ಥಳಕ್ಕೆ ನನ್ನನ್ನು ಕರೆಸಿ ಪಂಚನಾಮೆ ಮಾಡಿದರು . ಆ ಸಮಯಕ್ಕೆ ಪೋಟೋ ತೆಗೆದರು . ಸಾಕ್ಷಿ ಗುರುತಿಸಿದ ಪೋಟೋಗಳನ್ನು ನಿಪಿ-2 ರಿಂದ 5

ಎಂದು ಗುರುತಿಸಲಾಯಿತು. ಪೊಲಿಸರಿಗೆ ಮರು ಹೇಳಿಕೆ ನೀಡಿಲ್ಲ . ಈ ಕುರಿತು ಹೆಚ್ಚಿನ ಮಾಹಿತಿ ಇಲ್ಲ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಅಪಘಾತದ ದಿನ ಬೆಳಗ್ಗೆ ನಾನು ಮನೆಯ ಮುಂದೆ ನಿಂತಾಗ ಮರಿಯವ್ವ , ಆಕೆಯ ಸೊಸೆ ರೇಣುಕಾ , ಮಕ್ಕಳಾದ ಪ್ರಣವ ಮತ್ತು ಪೃಥ್ವಿರವರು ಬ್ಯಾಡಗಿಗೆ ಹೋಗುತ್ತೆವೆ ಎಂದು ರಮೇಶ ಹಂಚಿನಮನಿ ಇತನ ರಿಕ್ಷಾ ನಂಃ ಕೆಎ-25/ಡಿ-3725 ಇದರಲ್ಲಿ ಹತ್ತಿರ ರೈಲ್ವೆ ಸ್ಟೇಶನ್ ಗೆ ಹೋದರು ಎಂದರೆ ಸರಿ . ಸ್ವಲ್ಪ ಸಮಯದ ನಂತರ ರೇಣುಕಾ ಇವರು ದೂರವಾಣಿಯಲ್ಲಿ ಸಂಪರ್ಕಿಸಿ ಅಪಘಾತವಾದ ಬಗ್ಗೆ ಹೇಳಿದರು ಎಂದರೆ ಸರಿ . ನಾನು ಅಪಘಾತ ಸ್ಥಳಕ್ಕೆ ಹೋದಾಗ ರೇಣುಕಾ ಇವರನ್ನು ನಾನು ವಿಚಾರಿಸಿದಾಗ ಅವರು ರಿಕ್ಷಾದಲ್ಲಿ ಹೋಗುತ್ತಿರುವಾಗ ಎದುರುಗಡೆ ಅಂದರೆ ಜರ್ಮನ ಸರ್ಕಲ ಕಡೆಯಿಂದ ಕೇಲಗೇರಿ ಕಡೆ ಒಬ್ಬ ಲಾರಿ ಚಾಲಕನು ಅತೀ ವೇಗವಾಗಿ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು ರಿಕ್ಷಾಕ್ಕೆ ಡಿಕ್ಕಿಪಡಿಸಿದನು ಎಂದು ಹೇಳಿದರು ಎಂದರೆ ಸರಿ . ಅಪಘಾತದ ರಭಸಕ್ಕೆ ರಿಕ್ಷಾ ಪಲ್ಟಿಯಾಗಿ ಅದರಲ್ಲಿದ್ದ ಎಲ್ಲರೂ ಹೊರಗೆ ಬಿದ್ದರು ಮತ್ತು ರಮೇಶ ಹಂಚಿನಮನಿ ಸ್ಥಳದಲ್ಲಿಯೇ ಮರಣ ಹೊಂದನು ಎಂದು ಹೇಳಿದರು ಎಂದರೆ ಸರಿ . ರೇಣುಕಾ ಮತ್ತು ಪ್ರಣವಗೆ ದೇಹದ ವಿವಿಧ ಭಾಗಗಳಿಗೆ ಬಲವಾದ ಪೆಟ್ಟಾಯಿತು . ಪ್ರಣವ ಇವರ ಒಂದು ಕಾಲು ತುಂಡಾಗಿತ್ತು ಮತ್ತು ಪೃಥ್ವಿ ಇವರಿಗೆ ತಲೆಗೆ ಗಾಯವಾಗಿತ್ತು ಎಂದರೆ ಸರಿ . ಅಪಘಾತಪಡಿಸಿದ ಲಾರಿ ಚಾಲಕನು ತನ್ನ ವಾಹನವನ್ನು ಸ್ಥಳದಲ್ಲಿಯೇ ನಿಲ್ಲಿಸಿ ಅಲ್ಲಿಂದ ಪರಾರಿಯಾಗಿದ್ದನು ಎಂದರೆ ಸರಿ . ಲಾರಿ ನಂಬರ ನೋಡಲಾಗಿ

ಸಿಸಿ ನಂಃ 170/2025
ಸಿ.ಡಬ್ಲೂ 1/ಪಿ.ಡಬ್ಲೂ 1

ಜಿಎ-06/ಟಿ-9097 ಎಂಬುದಾಗಿ ಇತ್ತು ಎಂದರೆ ಸರಿ . ಸದರಿ ಅಪಘಾತವಾದಾಗ ಸಮಯ ಬೆಃ 4.40 ಆಗಿತ್ತು ಎಂದರೆ ಸರಿ . ಗಾಯಾಳುಗಳನ್ನು ಆ್ಯಂಬುಲೆನ್ಸ ನಲ್ಲಿ ಧಾರವಾಡದ ಸಿವಿಲ್ ಆಸ್ಪತ್ರೆಗೆ ದಾಖಲಿಸಿದೆವು ಎಂದರೆ ಸರಿ . ಈ ಎಲ್ಲಾ ಮಾಹಿತಿಗಳನ್ನು ನನ್ನ ದೂರಿನಲ್ಲಿ ದಾಖಲು ಮಾಡಿದ್ದೇನೆ ಎಂದರೆ ಸರಿ .

ದಿಃ 20.10.2024 ರಂದು ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ ಬಗ್ಗೆ ಮತ್ತು ಗಾಯಾಳು ಪ್ರಣವ ಇತನು ಕಿಮ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿದ ಬಗ್ಗೆ ಗೊತ್ತಾಗಿ ಈ ಕುರಿತು ಪೊಲಿಸರಿಗೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿ . ದಿಃ 21.10.2024 ರಂದು ಪೊಲಿಸರು ನನ್ನನ್ನು ಠಾಣೆಗೆ ಕರೆಸಿ ಠಾಣೆ ಯಲ್ಲಿದ್ದ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೊರಿಸಿದರು ಮತ್ತು ಆತನೇ ಅಪಘಾತಪಡಿಸಿರುವುದಾಗಿ ಹೇಳಿದರು ಹಾಗೂ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಚಾಸಾ-10 ಮತ್ತು 11 ರವರು ಆರೋಪಿಯನ್ನು ಗುರುತಿಸಿದರು ಮತ್ತು ಆತನ ಹೆಸರು ಉದ್ದಪ್ಪ ಹೊನಕುಪ್ಪಿ ಎಂದು ಕೇಳಿ ಗೊತ್ತಾಗಿತು ಎಂದರೆ ಸರಿಯಲ್ಲ . ಈ ಕುರಿತು ಈಗ ಓದಿ ಹೇಳಿದಂತೆ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು . ದಿಃ 29.10.2024 ರಂದು ಗಾಯಾಳು ಪೃಥ್ವಿ ರವಿ ಹಂಚಿನಮನಿ ಇತನು ಕಿಮ್ಸ ಆಸ್ಪತ್ರೆಯಲ್ಲಿ ದಿಃ 28.10.2024 ರಂದು ಮರಣ ಹೊಂದಿದ ಬಗ್ಗೆ ಗೊತ್ತಾಗಿ ಈ ಕುರಿತು ಪೊಲಿಸರಿಗೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿ . ನಿಪಿ-6 ರಂತೆ ಪೊಲಿಸರಿಗೆ ಮರು ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ಸಿಸಿ ನಂಃ 170/2025
ಸಿ.ಡಬ್ಲೂ 1/ಪಿ.ಡಬ್ಲೂ 1

ಅಪಘಾತ ಸ್ಥಳದ ಚೆಕ್ ಬಂದಿ ಹೇಳಬಲ್ಲೆ . ಅಪಘಾತವು ಟ್ರಕ ಚಾಲಕನ ತಪ್ಪಿನಿಂದ ಆಗಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತವು ಆಟೋ ರಿಕ್ಷಾ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ . ರಿಕ್ಷಾ ಚಾಲಕನೇ ಲಾರಿಗೆ ಡಿಕ್ಕಿಪಡಿಸಿದ್ದು ಆದರೆ ಲಾರಿ ಚಾಲಕನು ಡಿಕ್ಕಿಪಡಿಸಿರುವುದಾಗಿ ಸುಳ್ಳು ದೂರು ಕೊಟ್ಟು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಗಾಯಾಗಳುಗಳಿಗೆ ಮತ್ತು ಮರಣ ಹೊಂದಿದವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಗಾಯಾಗಳುಗಳಿಗೆ ಮತ್ತು ಮರಣ ಹೊಂದಿದವರು ನಮ್ಮ ಓಣಿಯ ನಿವಾಸಿಗರು ಎಂದರೆ ಸರಿ . ಸದರಿಯವರ ಕಟುಂಬಕ್ಕೆ ಪರಿಹಾರ ಸಿಗಲೀ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.